

ಬರೆದ ಗುಣವಿಶೇಷಣ ಅದಾಗಿತ್ತು. ವೈರಿ ಸತ್ತ ಮೇಲೆ ಅಥವಾ ಇಲ್ಲವಾದಾಗ ಎದುರಾಳಿಗೆ ಆತನ ಗುಣಧರ್ಮಗಳು ಗೋಚರಿಸುತ್ತವಂತೆ. ಹಾಗೆಯೇ ಸಾಮ್ರಾಟ ಅಶೋಕರು. ತನ್ನ ವೈರಿ ಪ್ರತಿಸ್ಪರ್ಧಿ ಎಲ್ಲಕ್ಕಿಂತಲೂ ಹೆಚ್ಚಾಗಿ ತನ್ನ ಅಣ್ಣನನ್ನು ತಾವೇ ರುಂಡಚೆಂಡಾಡಿ ಬೆಂಕಿಯಲ್ಲಿ ಭಸ್ಮ ಮಾಡಿದರೂ ಆತನನ್ನು ಸ್ವರ್ಗವಾಸಿಯನ್ನಾಗಿ ಮಾಡಿದ್ದಾರೆ ಅನ್ನಿಸಿತು ಆ ಬಾಲಕನಿಗೆ. ರಾಣಿಯರಾದ ದೇವಿ, ಕರುವಾಕಿ ಅಸಾಂಧಿಮಿತ್ರೆ ಬಂದು ಆ ಹುಡುಗನ ಪಾದಪದ್ಮಗಳಿಗೆ ಪೊಡಮಟ್ಟು ಆಶೀರ್ವಾದ ತೆಗೆದುಕೊಂಡರು. ಪಟ್ಟದರಸಿ ಅಸಾಂಧಿಮಿತ್ರೆ ಈ ಹನ್ನೆರಡು ವರ್ಷದ ಬಾಲಕನನ್ನು ಸಂದೇಹದಿಂದಲೇ ತಲೆಯಿಂದ ಆಪಾದಮಸ್ತಕದವರೆಗೂ ನೋಡಿದಳು. ಈ ಹದಿಮೂರು ವರ್ಷದ ಕಾಲಘಟ್ಟದಲ್ಲಿ ಗಂಗೆಯ ಮಡಿಲಿನಲ್ಲಿ ಹರಿದ ನೀರೆಷ್ಟೋ? ಲೆಕ್ಕ ಇಟ್ಟವರಾರು? ಆದರೂ 'ಅವಳು' ಉದ್ಘೋಷಿಸಿದ ಶಪಥ ಇಂತಹ ಹುಡುಗರನ್ನು ನೋಡಿದಾಕ್ಷಣ ನೆನಪಾಗುತ್ತಿತ್ತು. ಮತ್ತೆಮತ್ತೆ ನೋಡಿದಳು. ಹಿಂದೆಮುಂದೆ ತಿರುಗಾಡಿ ನೋಡಿದಳು. ನೀಳವಾದ ಮೂಗು, ಶಬ್ದಸ್ಫಟಿಕವನ್ನು ಕರಾರುವಾಕ್ಕಾಗಿ ಹೇಳುವ ನಾಲಗೆ ಮತ್ತು ಕಂಠ, ಬೌದ್ಧ ತತ್ವದ ಭಂಡಾರ ಇವನು. ಅವನು ಇರಲಿಕ್ಕಿಲ್ಲ ಈ ಹುಡುಗ ಎನ್ನಿಸಿತು. ಆದರೆ, ಮುಖದ ತುಂಬಾ ಭಗವಾನ್ ಬುದ್ಧ ಗುರುವಿನ ಚಹರೆ, ಇನ್ನರ್ಧ ಅವರ ಚಹರೆ, ಅಸಾಂಧಿಮಿತ್ರಗಳಿಗೆ ಗಾಬರಿಯಾಗಿ ಲಘುಬಗೆಯಿಂದ ಅಂತಃಪುರ ಸೇರಿದಳು. ಚಿಂತೆಯ ಕಾರ್ಮೋಡವೇ ಹೊದ್ದು ಮಲಗಿದಳು. ನಿದ್ರೆ ಎಂಬುದು ಮರೀಚಿಕೆಯಾಗಿತ್ತು. ಈ ದಿನ ಮಹಾರಾಜರು ಪಾಳೆಯ ಪ್ರಕಾರ ದೇವಿಯ ಅಂತಃಪುರದಲ್ಲಿ ತಂಗುವುದು ಶತಸಿದ್ಧ. ಅವರಿಗೆ ಇದನ್ನು ಹೇಳುವವರು ಯಾರು? ಎಂದು ಹಾಸಿಗೆ ತುಂಬಾ ಒದ್ದಾಡಿದಳು. ಹೊರಗೆ ಗಾಢವಾದ ಬೆಳ್ದಿಂಗಳು. ಇದು ಗುರುಪೂರ್ಣಿಮೆಯ ಬೆಳಕು. ಪೂರ್ಣಿಮೆಯ ಬೆಳಕಿನೊಂದಿಗೆ ಈ ಹುಡುಗ ಅರಮನೆ ಪ್ರವೇಶಿಸಿದ್ದಾನೆ.

ಇತ್ತ ಅಶೋಕ ಮಹಾರಾಜರು ಬೌದ್ಧಧರ್ಮವನ್ನು ಅಷ್ಟಾಗಿ ಹಚ್ಚಿಕೊಂಡಿರಲಿಲ್ಲ. ಆರು ಶೈವಪಂಥಗಳನ್ನು ಅವರು ಏಕಭಾವದಿಂದ ಅನುಸರಿಸುತ್ತಿದ್ದರು.